MVC No. 5/2020 PW-**2**

**ದಿನಾಂಕ 06.02.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀಮತಿ ಎಸ್ ಕೆ ಡಿ ವಕೀಲರಿಂದಃ

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ಅರ್ಜಿಗೆ ಸಂಬಂದಪಟ್ಟಂತೆ ಹೊರ ರೋಗಿ ದಾಖಲಾತಿಯನ್ನು ನಿಪಿ-18 ಎಂದು, ಕೇಸ್ ಶೀಟನ್ನು ನಿಪಿ-19 ಎಂದು, 7 ಕ್ಷಕಿರಣವನ್ನು ಒಟ್ಟಾರೆಯಾಗಿ ನಿಪಿ-20 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ

ಅರ್ಜಿದಾರರು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತಾರೆ. ಅಪಘಾತದ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ಬರೆದಿಲ್ಲ. ಅರ್ಜಿದಾರರಿಗೆ 2 ಮೂಳೆ ಮುರಿತಗಳು ಉಂಟಾಗಿರುತ್ತದೆ. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ನಾನೇ ಮಾಡಿರುತ್ತೇನೆ. ಮೂಳೆ ಮುರಿತ ಕೂಡಿಕೊಂಡಿದೆ ಎಂದರೆ ನಿಜ. ಮೂಳೆ ಮುರಿತ ಆಗಿರುವ ಬಗ್ಗೆ ಮತ್ತು ಮೂಳೆ ಕೂಡಿಕೊಂಡಿರುವ ಬಗ್ಗೆ ಕ್ಷಕಿರಣಗಳನ್ನು ಹಾಜರುಪಡಿಸಿರುತ್ತೇನೆ. ಅರ್ಜಿದಾರರು ಫಿಜಿಯೋ ತೆರೆಫಿ ಚಿಕಿತ್ಸೆ ಪಡೆದರೆ ಕಡಿಮೆಯಾಗುತ್ತದೆ ಎಂದರೆ ನಿಜ. ನಾನು ಸಂಪೂರ್ಣ ದೇಹಕ್ಕೆ ಅಂಗ ನ್ಯೂನ್ಯತೆ ನಿರ್ದರಣೆ ಮಾಡಿಲ್ಲ ಎಂದರೆ ನಿಜ. ನಾನು ನೀಡಿರುವ ಅಂಗ ನ್ಯೂನ್ಯತೆ ನಿರ್ದರಣೆ ಸಂಪೂರ್ಣ ದೇಹಕ್ಕೆ ಶೇಕಡಾ 10 ರಷ್ಟು ಬರುತ್ತದೆ ಎಂದರೆ ಸುಳ್ಳು. ನಾನು ಸುಳ್ಳು ಅಂಗ ನ್ಯೂನ್ಯತಾ ನಿರ್ಧರಣಾ ಪ್ರಮಾಣ ಪತ್ರವನ್ನು ನೀಡಿರುತ್ತೇನೆಂದರೆ ಸುಳ್ಳು ಅರ್ಜಿದಾರರಿಗೆ ಮೂಳೆಗಳು ಕೂಡಿಕೊಂಡಿರುವುದರಿಂದ ಸಂಪೂರ್ಣ ದೇಹಕ್ಕೆ ಶೇಕಡಾ 3 ರಷ್ಟು ಬರುತ್ತದೆ ಎಂದರೆ ಸುಳ್ಳು. ಒಳಅಳವಡಿಕೆಗಳನ್ನು ತೆಗೆಯಲು ನಾನು ಅಂದಾಜು ವೆಚ್ಚ ಕೊಟ್ಟಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಒಳಅಳವಡಿಕೆಗಳನ್ನು ತೆಗೆಯಬಹುದು ಎಂದರೆ ನನಗೆ

ಗೊತ್ತಿಲ್ಲ.ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಬರಲೀ ಎಂದು ಹೆಚ್ಚಿನ ಅಂಗ ನ್ಯೂನ್ಯತೆಯನ್ನು ತೋರಿಸಿದ್ದೇನೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.